ಕೆರೆಯಿಂದ ಹೊರ ಬಂದಾಗ ಅವನ ಮೈ ಮೇಲೆ ಜನಿವಾರ ಇರುವುದನ್ನು ನೋಡಿದೆ. ನಮ್ಮಜ್ಜ, ಮುತ್ತಜ್ಜರ ಕಾಲದಿಂದ್ಲೂ ನಾವೆಲ್ಲಾ ಸ್ನಾನ, ಧ್ಯಾನ, ಸಂಧ್ಯಾ ವಂದನೆ ಮಾಡುತ್ತಿದ್ದ ಜಾಗದಲ್ಲೇ ಗೊದ್ಲೆಯೂ ಧ್ಯಾನ ಮಾಡಲು ಕೂತಿದ್ದಲ್ಲದೆ ನೀರಿಗಿಳಿದು ಅಪವಿತ್ರ ಮಾಡಿದ್ದಾನೆ. ಜನಿವಾರ ಹಾಕಿಕೊಂಡು ನಮ್ಮ ಧರ್ಮಕ್ಕೆ ಅಪಚಾರ ಎಸಗಿದ್ದಾನೆ' ಎಂದರು.

ದಾಸೇಗೌಡ 'ಗೊದ್ಲೆ ಮುಂದ್ಕೆ ಬರ್ಲ' ಎಂದು ಕರೆದರು. 'ಯೋನ್ಲಾ? ಸ್ವಾಮೇರು ಯೋಳಿದ್ದೆಲ್ಲ ದಿಟವೇನ್ಲ? ನೀನ್ಯಾಕ್ಲ ಜನಿವಾರ ಹಾಕ್ಕಂಡಿದ್ದೀಯ? ಎಲ್ಲಿ ಅಂಗಿ ಬಿಚ್ಚು...' ಎಂದರು ವೆಂಕಟಪ್ಪ.

ಸುಮ್ಮನೆ ನಿಂತಿದ್ದ ಗೊದ್ಲೆಗೆ ಪಟೇಲರು, 'ಯಾಕ್ಲ ಸುಮ್ಕೆ ನಿಂತ್ಕಂಡೆ? ಬಿಚ್ಲ ಅಂಗಿಯ...' ಎಂದು ಗದರಿಸಿದರು.

ನಿಧಾನವಾಗಿ ಅಂಗಿ ಗುಂಡಿ ಬಿಚ್ಚತೊಡಗಿದ ಗೊದ್ಲೆಯತ್ತ ಜನರ ಗಮನ ಕೇಂದ್ರೀಕೃತವಾಯಿತು. ಅಂಗಿಯನ್ನು ಬಿಚ್ಚಿದಾಗ ಅವನ ಮೈ ಮೇಲೆ ಜನಿವಾರ ಇರುವುದನ್ನು ನೋಡಿ ಎಲ್ಲರೂ ದಿಗ್ಭ್ರಾಂತರಾದರು. ಕರ್ಕಿಲಿ ಸಹಿತ ಹೆಂಗಸರು ಬಾಯಿ ಮೇಲೆ ಬೆರಳಿಟ್ಟುಕೊಂಡರು.

ವೆಂಕಟಪ್ಪ ಕೇಳಿದರು, 'ಮುಳ್ಕಟ್ಟ ನಿನ್ಮಗ ಜನಿವಾರ ಹಾಕ್ಕಂಡಿರಾದು ನಿಂಗೆ ಗೊತ್ತಿತ್ತೇನ್ಲ?'

ಕೈಕಟ್ಟಿಕೊಂಡು ಐದಾರು ಹೆಜ್ಜೆ ಮುಂದಕ್ಕೆ ಬಂದು ನಿಂತ ಮುಳ್ಕಟ್ಟ 'ಗೊತ್ತಿರ್ನಿಲ್ಲ ಗೌಡ್ರೆ. ನಿನ್ಮೇಲೆ ಪಂಚಾಯ್ತಿ ಸಾರಾಕಕೆ ಯೋಳವ್ರೆ. ನೀನೇನು ತೆಪ್ಪು ಮಾಡಿದ್ದೀಯ ಯೋಳು ಅಂತ ಕೇಳ್ದೆ. ಆದ್ರೆ ಬಾಯ್ನೇ ಬುಡ್ಲಿಲ್ಲ. ಇವ್ನು ಜನಿವಾರ ಹಾಕ್ಕಂಡಿರಾದು ನಂಗೆ ಈಗ್ಲೆ ಗೊತ್ತಾಗಿದ್ದು' ಎಂದ.

'ಗೊದ್ಲೆ ನಿಂಗೆ ಜನಿವಾರ ಯಾರ್ಲ ಕೊಟ್ಟಿದ್ದು?' ಪಟೇಲರ ಪ್ರಶ್ನೆ.

'ಯಾರೂ ಕೊಡ್ನಿಲ್ಲ. ರಾಮಸ್ವಾಮೇರು ಕೆರೆತಾವ ಅರಳಿ ಮರಕ್ಕೆ ನೇತಾಕಿದ್ರು. ಅದ ನಾ ಹಾಕ್ಕಂಡೆ'

'ಅದ ನೀನ್ಯಾಕ್ಲ ಹಾಕ್ಕಂಡೆ?'

'ನಾನೂ ಬ್ರಾಹ್ಮಣ ಆಗ್ಬೇಕೂಂತ' ಗೊದ್ಲೆ ಮಾತಿಗೆ ಜನರೆಲ್ಲರೂ ಗೊಳ್ಳೆಂದು ನಕ್ಕರು.

'ದನಿನ್ ಬಾಡು ತಿನ್ನೋ ನೀನು ಬ್ರಾಂಬ್ರಾಯ್ತಿಯ?'

ಮತ್ತೆ ಜನ ನಕ್ಕರು.

'ಇಲ್ಲ ಪಟೇಲ್ರೆ. ಅವನು ಹುಟ್ಟಾಗ್ನಿಂದ ಇಲ್ಲಿಗಂಟ ಕೋಳಿ ಮೊಟ್ಟೆನೂ ತಿಂದಿಲ್ಲ' ಎಂದ ಮುಳ್ಕಟ್ಟ.

'ಆತು ತಿಂದಿಲ್ಲ ಅಂತಾನೆ ಇಟ್ಕಳನ. ಅದ್ಬುಡು. ಗೊದ್ಲೆ, ಹೊಲೇರ ಜಾತೀಲಿ ಹುಟ್ಟಿರೋ ನೀನು ಜನಿವಾರ ಹಾಕಬುಟ್ರೆ ನಿನ್ನ ಬ್ರಾಂಬ್ರು ಅಂತ ಯಾರೂ ಒಪ್ಕಳ್ಳಕ್ಕಿಲ್ಲ. ಜನಿವಾರ ತೆಗ್ದು ಸ್ವಾಮೇರತ್ರ ತೆಪ್ಪಾಯ್ತುಂತ ಕೇಳ್ಕ' ಅಂದರು ದಾಸೇಗೌಡ.

ಆದರೆ ಗೊದ್ಲೆ ಊರ ಹೊರಗಿನ ಮೂರಡಿ ಎತ್ತರದ ಗಡಿ ಗುರುತು ಕಲ್ಲಿನ ಹಾಗೆ ಮಿಸುಕಾಡದೆ ನಿಂತ.

ಪಟೇಲರು ಸಿಟ್ಟಿನಿಂದ, 'ಮುಳ್ಕಟ್ಟ ಅದೇನ್ ಅವ್ನ ಮಕಾ ನೋಡ್ತಾ ನಿಂತಿದ್ದೀಯ. ನೀನೇ ಜನಿವಾರ ತೆಗೀಲಾ' ಎಂದರು. ಮುಳ್ಕಟ್ಟ ಕೈ ಮುಂದು ಮಾಡಿದ. ಆದರೆ ಗೊದ್ಲೆ ತನ್ನೆರಡೂ ಕೈಗಳನ್ನು ತನ್ನೆದೆಗೆ ಕತ್ತರಿಯಂತೆ ಅಡ್ಡ ಇಟ್ಟುಕೊಂಡ. ಕೈಗಳನ್ನು ಬೇರ್ಪಡಿಸಲು ಪ್ರಯತ್ನಪಡುತ್ತಿರುವಂತೆಯೇ, ಗೊದ್ಲೆ ಮುಳ್ಕಟ್ಟನಿಂದ ಬಿಡಿಸಿಕೊಂಡು ಓಡಿ ಹೋದ.

'ನೋಡ್ಲ ಮುಳ್ಕಟ್ಟ ನೀನು ಇಷ್ಟಕ್ಕೇ ಸುಮ್ಕಾಗಬ್ಯಾಡ. ಅವ್ನ ಮೈ ಮೇಲಿರೋ ಜನಿವಾರನ ತೆಗ್ಸದು ನಿನ್ ಜವಾಬ್ದಾರಿ' ಎಂದರು ಪಟೇಲರು.

ಮುಳ್ಕಟ್ಟ, ಕರ್ಕಿಲಿ ಗುಡಿಸಿಲಿಗೆ ಬಂದಾಗ ಗೊದ್ಲೆ, ಗೋಡೆಗೂಡಿನಲ್ಲಿದ್ದ ದೇವರಿಗೆದುರಾಗಿ ಕುಳಿತು ಧ್ಯಾನ ಮಾಡುತ್ತಿದ್ದ. ಮುಳ್ಕಟ್ಟನಿಗೆ ಏನು ಮಾಡಬೇಕು, ಮಾತನಾಡಬೇಕು ಎಂದು ತೋಚದೆ ಕಂಬಕ್ಕೊರಗಿ ಕುಳಿತುಕೊಂಡ. ಅವನದೇ ಮನಸ್ಥಿತಿಯಲ್ಲಿದ್ದ ಕರ್ಕಿಲಿ ಅಡುಗೆ ಕೋಣೆ ಹೊಕ್ಕಳು.

ಗೊದ್ಲೆ ಶಾಲೆಗೆ ಹೋದಾಗ ಹುಡುಗರು 'ಬ್ರಾಹ್ಮಣ ಬಂದ ಬ್ರಾಹ್ಮಣ ಬಂದ' ಎಂದು ಆಡಿಕೊಂಡರು. ಅದನ್ನು ಕೇಳಿಸಿಕೊಂಡ ಬ್ರಾಹ್ಮಣ ಶಿಕ್ಷಕರೊಬ್ಬರು ಹುಡುಗರನ್ನು ಕೇಳಿದರು.

'ಯಾರನ್ನು ಬ್ರಾಹ್ಮಣ ಬಂದ ಅನ್ನುತ್ತಿದ್ದೀರಿ?'

'ಗೊದ್ಲೆಗೆ ಸಾರ್'

ಅವನತ್ತ ತಿರುಗಿ ನೋಡಿದ ಅವರು ಆಶ್ಚರ್ಯದಿಂದ 'ಗೊದ್ಲೆಗಾ?' ಎಂದರು.

'ಹೂಸಾ. ಅವನು ಬ್ರಾಹ್ಮಣ ಆಗ್ಬೇಕೂಂತ ಜನಿವಾರ ಹಾಕ್ಕಂಡಿದ್ದಾನೆ'.

'ಹೌದಾ? ಆಗಬಹುದು. ಯಾರು ಬೇಕಾದರೂ ಬ್ರಾಹ್ಮಣರಾಗಬಹುದು. ಸನ್ಯಾಸಿ ಮಠಾಧಿಪತಿಯೂ